# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ದಿನಾಂಕ: 23-03-2018**

**ಪ್ರಕಟಣೆಯ ಕೃಪೆಗಾಗಿ............**

ವಿಜಯಪುರ: ಅಂತರಾಷ್ಟ್ರೀಯ ಮಟ್ಟದ ನಕ್ಷೆಯಲ್ಲಿ ವಿಜಯಪುರ ಜಿಲ್ಲೆಯು ಮಹತ್ವದ ಸ್ಥಾನದಲ್ಲಿ ಗುರುತಿಸಿಕೊಂಡಿದ್ದರೆ ಅದಕ್ಕೆ ಆದಿಲ್‌ಶಾಹಿಗಳ ವಾಸ್ತುಶಿಲ್ಪದ ಕೊಡುಗೆ ಕಾರಣ ಎಂದು ಖ್ಯಾತ ಇತಿಹಾಸ ತಜ್ಞ ಎಚ್.ಜಿ. ದಡ್ಡಿ ಅಭಿಪ್ರಾಯ ವ್ಯಕ್ತಪಡಿಸಿದರು.

ಮಹಿಳಾ ವಿವಿ ಜ್ಞಾನಶಕ್ತಿ ಆವರಣ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ, ಪ.ಜಾ./ಪ.ಪಂ. ಘಟಕ ಹಾಗೂ ಇತಿಹಾಸ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಐತಿಹಾಸಿಕ ಸಂಪನ್ಮೂಲಗಳ ಮಹತ್ವ ಕುರಿತ ಜಾಗೃತಿ ಹಾಗೂ ಕರ್ನಾಟಕ ಕೋಟೆಗಳ ಕುರಿತ ಛಾಯಾಚಿತ್ರ ಪ್ರದರ್ಶನದ ಮೂರು ದಿನದ ಕಾರ್ಯಾಗಾರದ ಎರಡನೇ ದಿನದ ಗೋಷ್ಠಿಯಲ್ಲಿ 'ವಿಜಯಪುರದ ಆದಿಲ್-ಶಾಹಿಗಳ ವಾಸ್ತುಶಿಲ್ಪ' ವಿಷಯದ ಕುರಿತು ಅವರು ಮಾತನಾಡಿದರು.

ಜಗತ್ತಿನಲ್ಲಿ ಅತಿ ಹೆಚ್ಚು ವಾಸ್ತುಶಿಲ್ಪ ಹೊಂದಿದ ನಗರ ವಿಜಯಪುರ ಜಿಲ್ಲೆಯಾಗಿದೆ. ಆದರೆ ಇಲ್ಲಿನ ಐತಿಹಾಸಿಕ ಸ್ಮಾರಕಗಳು ಅತಿಕ್ರಮಣ ಆಗಿವೆ. ಅವುಗಳನ್ನು ರಕ್ಷಿಸಿ, ಬೆಳೆಸಿ, ಸುಧಾರಣೆ ಮಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಈ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರೆ ವಿಜಯಪುರದ ವಾಸ್ತುಶಿಲ್ಪವನ್ನು ವಿಶ್ವಕ್ಕೆ ಪರಿಚಯಿಸಲು ಸಾಧ್ಯ ಎಂದು ಸ್ಪಷ್ಟಪಡಿಸಿದರು.

'ಕರ್ನಾಟಕದ ಪ್ರಸಿದ್ಧ ಪ್ರವಾಸಿ ತಾಣಗಳು' ಕುರಿತು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಕೆ.ಎಲ್.ಎನ್. ಮೂರ್ತಿ ಮಾತನಾಡಿ, ದೇಶ ಸುತ್ತಿ ನೋಡು ಕೋಶ ಓದಿ ನೋಡು ಎಂಬ ನಾಣ್ಣುಡಿಯಂತೆ ಕರ್ನಾಟಕದ ಐತಿಹಾಸಿಕ ಸ್ಮಾರಕಗಳನ್ನು ಒಮ್ಮೆಯಾದರೂ ನೋಡಿ ಕಣ್ತುಂಬಿಕೊಳ್ಳಬೇಕು ಎಂದರು.

ಪ್ರವಾಸದ ಸ್ವರೂಪ ಕಾಲ-ಕಾಲಕ್ಕೆ ಬದಲಾಗುತ್ತಾ ಬಂದಿದೆ. 20ನೇ ಶತಮಾನದಿಂದ ಪ್ರವಾಸವು ಒಂದು ಉದ್ಯಮವಾಗಿ ಬೆಳೆಯುತ್ತಾ ಸಾಗುತ್ತಿದೆ. ಸ್ಥಳೀಯ ಚರಿತ್ರೆ ಹಾಗೂ ಐತಿಹಾಸಿಕ ಸ್ಮಾರಕಗಳನ್ನು ಮರೆತು ವಿದೇಶಿ ಪ್ರವಾಸಕ್ಕೆ ಪ್ರಾಮುಖ್ಯತೆ ನೀಡುತ್ತಿರುವುದು ವಿಷಾದನೀಯ ಸಂಗತಿ ಎಂದು ಹೇಳಿದರು.

ಪ್ರವಾಸ ಎಂದರೆ ಕೇವಲ ಒಂದು ಸ್ಥಳವನ್ನು ನೋಡಿ ಬರುವುದಷ್ಟೇ ಅಲ್ಲ. ಆ ಸ್ಥಳದ ಐತಿಹಾಸಿಕ ಮತ್ತು ವಾಸ್ತುಶಿಲ್ಪದ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕು ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

'ಬಾದಾಮಿಯ ಐತಿಹಾಸಿಕ ಸ್ಮಾರಕಗಳು' ವಿಷಯದ ಕುರಿತು ವಿಶ್ರಾಂತ ಪ್ರಾಧ್ಯಾಪಕ ಡಾ.ಶೀಲಾಕಾಂತ ಪತ್ತಾರ ಮಾತನಾಡಿ, ಬಾದಾಮಿ ಹೆಸರಿನ ಮೂಲ ಆಕರ ಶಾಸನಗಳಿಂದ ದೊರೆತಿದೆ. ಮೂರ್ತಿ ದೇವಾಲಯಗಳನ್ನು ಕೇವಲ ನೋಡುವುದಾಗದೆ ಕಾಣುವುದಾಗಬೇಕು. ವಾಸ್ತುಶಿಲ್ಪದ ಭೌತಿಕ ಸ್ವರೂಪವನ್ನು ಕಾವ್ಯದಲ್ಲಿ, ರಾಗದಲ್ಲಿ ಹಾಗೂ ನಾಟ್ಯದಲ್ಲಿ ಪ್ರಸ್ತುತಪಡಿಸಿದರೆ ಇತಿಹಾಸ ಇನ್ನೂ ಗಟ್ಟಿಗೊಳ್ಳುವುದು ಎಂದು ತಿಳಿಸಿದರು.

ಎಲ್ಲ ಧರ್ಮಗಳನ್ನು ಪ್ರೋತ್ಸಾಹಿಸಿದ ರಾಜ ಮನೆತನ ಬಾದಾಮಿಯ ಚಾಳುಕ್ಯರದು. ಶಿಲ್ಪಗಳ ಅಧ್ಯಯನ ಕೈಗೊಳ್ಳುವವರಿಗೆ ಬಾದಾಮಿ ಹಾಗೂ ಐಹೊಳೆ ಬಹು ದೊಡ್ಡ ಆಕರ. ಚಾಳುಕ್ಯರಿಂದ ನಿರ್ಮಾಣಗೊಂಡ 81 ಭಂಗಿಗಳನ್ನು ಒಳಗೊಂಡ ಒಂದೇ ಕೆತ್ತನೆ ಕಲಾತ್ಮಕ ಜಗತ್ತಿಗೆ ನೀಡಿದ ಅದ್ಭುತ ಕೊಡುಗೆ ಎಂದು ಹೇಳಿದರು.

ಇಡೀ ದಕ್ಷಿಣ ಭಾರತದಲ್ಲಿ ಮೊದಲಿಗೆ ತ್ರಿಕೂಟಾಲಯ ನಿರ್ಮಿಸಿದ ಕೀರ್ತಿ ಬಾದಾಮಿಯ ಚಾಳುಕ್ಯರಿಗೆ ಸಲ್ಲುತ್ತದೆ. ಚಾಳುಕ್ಯ ನಿರ್ಮಾಣದ ವಾಸ್ತುಶಿಲ್ಪ ಕರ್ನಾಟಕದ ಹೆಮ್ಮೆಯ ಸಂಪತ್ತು ಎಂದು ಬಾದಾಮಿಯ ಚರಿತ್ರೆಯನ್ನು ಪ್ರಶಂಸಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿ ಪಿಎಂಇಬಿ ನಿರ್ದೇಶಕ ಪ್ರೊ.ಎಸ್.ಜಿ ಖಾಜಿ ಮಾತನಾಡಿ, ಐತಿಹಾಸಿಕ ಸ್ಮಾರಕಗಳನ್ನು ಮೂಲ ವಿಷಯವನ್ನಾಗಿಟ್ಟುಕೊಂಡು ಸಂಶೋಧನೆ ಕೈಗೊಳ್ಳುವ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಚರ್ಚೆಯಾದ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿನಿಯರು ಹೊರತಂದ ಮಹಿಳಾ ಧ್ವನಿ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ನಿಖಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಬೋಧಕ–ಬೋಧಕೇತರ ಸಿಬ್ಬಂದಿ ವರ್ಗದವರು, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ದೀಪಾ ದೊಡ್ಡಮನಿ ಸ್ವಾಗತಿಸಿದರು. ಅಶ್ವಿನಿ ಮಜ್ಜಗಿ ಪರಿಚಯಿಸಿದರು. ಪೂರ್ಣಿಮಾ ಕುರಿ ನಿರೂಪಿಸಿದರು.

**////ಫೋಟೋ ಕ್ಯಾಪ್ಷನ್////**

1) **ಮಹಿಳಾ ವಿವಿ ಜ್ಞಾನಶಕ್ತಿ ಆವರಣ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ, ಪ.ಜಾ./ಪ.ಪಂ. ಘಟಕ ಹಾಗೂ ಇತಿಹಾಸ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಐತಿಹಾಸಿಕ ಸಂಪನ್ಮೂಲಗಳ ಮಹತ್ವ ಕುರಿತ ಜಾಗೃತಿ ಹಾಗೂ ಕರ್ನಾಟಕ ಕೋಟೆಗಳ ಕುರಿತ ಛಾಯಾಚಿತ್ರ ಪ್ರದರ್ಶನದ ಮೂರು ದಿನದ ಕಾರ್ಯಾಗಾರದ ಎರಡನೇ ದಿನದ ಗೋಷ್ಠಿಯಲ್ಲಿ ಖ್ಯಾತ ಇತಿಹಾಸ ತಜ್ಞ ಎಚ್.ಜಿ. ದಡ್ಡಿ 'ವಿಜಯಪುರದ ಆದಿಲ್–ಶಾಹಿಗಳ ವಾಸ್ತುಶಿಲ್ಪ' ವಿಷಯದ ಕುರಿತು ಮಾತನಾಡಿದರು.**

2) **ಮಹಿಳಾ ವಿವಿ ಜ್ಞಾನಶಕ್ತಿ ಆವರಣ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ, ಪ.ಜಾ./ಪ.ಪಂ. ಘಟಕ ಹಾಗೂ ಇತಿಹಾಸ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಐತಿಹಾಸಿಕ ಸಂಪನ್ಮೂಲಗಳ ಮಹತ್ವ ಕುರಿತ ಜಾಗೃತಿ ಹಾಗೂ ಕರ್ನಾಟಕ ಕೋಟೆಗಳ ಕುರಿತ ಛಾಯಾಚಿತ್ರ ಪ್ರದರ್ಶನದ ಮೂರು ದಿನದ ಕಾರ್ಯಾಗಾರದ**

ಎರಡನೇ ದಿನದ ಗೋಷ್ಠಿಯಲ್ಲಿ 'ಕರ್ನಾಟಕದ ಪ್ರಸಿದ್ಧ ಪ್ರವಾಸಿ ತಾಣಗಳು' ಕುರಿತು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಕೆ.ಎಲ್.ಎನ್. ಮೂರ್ತಿ ಮಾತನಾಡಿದರು.

3) ಮಹಿಳಾ ವಿವಿ ಜ್ಞಾನಶಕ್ತಿ ಆವರಣ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ, ಪ.ಜಾ./ಪ.ಪಂ. ಘಟಕ ಹಾಗೂ ಇತಿಹಾಸ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಐತಿಹಾಸಿಕ ಸಂಪನ್ಮೂಲಗಳ ಮಹತ್ವ ಕುರಿತ ಜಾಗೃತಿ ಹಾಗೂ ಕರ್ನಾಟಕ ಕೋಟೆಗಳ ಕುರಿತ ಛಾಯಾಚಿತ್ರ ಪ್ರದರ್ಶನದ ಮೂರು ದಿನದ ಕಾರ್ಯಾಗಾರದ ಎರಡನೇ ದಿನದ ಗೋಷ್ಠಿಯಲ್ಲಿ 'ಬಾದಾಮಿಯ ಐತಿಹಾಸಿಕ ಸ್ಮಾರಕಗಳು' ವಿಷಯದ ಕುರಿತು ವಿಶ್ರಾಂತ ಪ್ರಾಧ್ಯಾಪಕ ಡಾ.ಶಿಲಾಕಾಂತ ಪತ್ತಾರ ಮಾತನಾಡಿದರು.

4) ಮಹಿಳಾ ವಿವಿ ಜ್ಞಾನಶಕ್ತಿ ಆವರಣ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ, ಪ.ಜಾ./ಪ.ಪಂ. ಘಟಕ ಹಾಗೂ ಇತಿಹಾಸ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಐತಿಹಾಸಿಕ ಸಂಪನ್ಮೂಲಗಳ ಮಹತ್ವ ಕುರಿತ ಜಾಗೃತಿ ಹಾಗೂ ಕರ್ನಾಟಕ ಕೋಟೆಗಳ ಕುರಿತ ಛಾಯಾಚಿತ್ರ ಪ್ರದರ್ಶನದ ಮೂರು ದಿನದ ಕಾರ್ಯಾಗಾರದ ಎರಡನೇ ದಿನದ ಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿ ಪಿಎಂಇಬಿ ನಿರ್ದೇಶಕ ಪ್ರೊ.ಎಸ್.ಜಿ ಖಾಜಿ ಮಾತನಾಡಿದರು.

